ಸ್ವಾಮಿ ವಿವೇಕಾನಂದರ ಕೃತಿಶ್ರೇಣಿಯಿಂದ

# ಭರತಖಂಡ



ಭರತಖಂಡವು ಜಗತ್ತಿನ ಮೇಲೆ ತನ್ನ ಪ್ರಭಾವವನ್ನು ಬೀರುತ್ತಿರುವುದು. ವ್ಯಾಪಾರದ ಸರಕುಗಳಂತೆ ಚಿಂತನೆಗಳು ಕೂಡ ಯಾರೇ ಆಗಲಿ ಮಾಡಿದ ಮಾರ್ಗದ ಮೂಲಕ ಮಾತ್ರ ಸಂಚರಿಸಬಲ್ಲವು. ಚಿಂತನೆಗಳು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಂಚರಿಸಬೇಕಾದರೂ ಒಂದು ಮಾರ್ಗ ಬೇಕಾಗುತ್ತದೆ. ಜಗತ್ತಿನ ಇತಿಹಾಸದಲ್ಲಿ ಯಾವುದಾದರೂ ಒಂದು ಆಕ್ರಮಣಕಾರಿ ಮಹಾನ್ ರಾಷ್ಟ್ರವು ತಲೆ ಎತ್ತಿ, ಜಗತ್ತಿನ ಬೇರೆ ಬೇರೆ ಭಾಗಗಳನ್ನು ಒಂದುಗೂಡಿಸಿದಾಗಲೆಲ್ಲ ಭಾರತೀಯ ಚಿಂತನೆಗಳು ಆ ಮಾರ್ಗದಲ್ಲಿ ಸಂಚರಿಸಿ ಪ್ರತಿ ಜನಾಂಗದ ನಾಡಿಗಳನ್ನೂ ಪ್ರವೇಶಿಸಿವೆ.

ಭಾರತಪುತ್ರರೇ, ನಾನಿಂದು ಅನುಷ್ಠಾನಕ್ಕೆ ಸಂಬಂಧಿಸಿದ ಕೆಲವು ವಿಷಯಗಳನ್ನು ಹೇಳುವೆನು. ನಮ್ಮ ಭರತಖಂಡದ ಗತವೈಭವದ ನೆನಪನ್ನು ನಿಮಗೆ ಉಂಟುಮಾಡುವ ಉದ್ದೇಶವಿದು. ಅನೇಕವೇಳೆ ಈ ಗತಕಾಲದ ವೈಭವವನ್ನು ಕುರಿತು ಚಿಂತಿಸುವುದು ವಿನಾಶಕಾರಿ, ಅದರಿಂದ ಪ್ರಯೋಜನವಿಲ್ಲ, ನಾವು ಭವಿಷ್ಯದತ್ತ ಮಾತ್ರ ನೋಡಬೇಕು ಎಂದು ಕೆಲವರು ಹೇಳುವರು. ಅದೇನೋ ಸತ್ಯ. ಆದರೆ ಹಿಂದಿನದರ ಮೇಲೆ ಮಾತ್ರ ಮುಂದೆ ಬರಲಿರುವುದನ್ನು ನಿರ್ಮಿಸಬಹುದು. ಆದ್ದರಿಂದ ನಿಮಗೆ ಸಾಧ್ಯವಾಗುವಷ್ಟು ಹಿಂದೆ ನೋಡಿ; ಹಿಂದಿನ ಅಮೃತ ಚಿಲುಮೆಯಿಂದ ತೃಪ್ತರಾಗುವವರೆಗೆ ಪಾನ ಮಾಡಿ; ಅನಂತರ ಮುಂದೆ ನೋಡಿ, ಮುಂದೆ ಅಡಿ ಇಡಿ; ಭರತಖಂಡವನ್ನು ಹಿಂದಿಗಿಂತ ಉಜ್ವಲತರವನ್ನಾಗಿ, ಮಹತ್ತರವಾದುದನ್ನಾಗಿ ಮಾಡಿ, ಉನ್ನತ ಶಿಖರಕ್ಕೆ ಕೊಂಡೊಯ್ಯಿರಿ ಎಂದು ನಾನು ಹೇಳುತ್ತೇನೆ.

ನಮ್ಮ ಪೂರ್ವಜರು ಮಹಾಮಹಿಮರಾಗಿದ್ದರು. ಅದನ್ನು ಮೊದಲು ಸ್ಮರಿಸಬೇಕು. ನಮ್ಮ ವ್ಯಕ್ತಿತ್ವವು ಯಾವುದರಿಂದ ಆಗಿದೆ ಎಂಬುದನ್ನೂ, ನಮ್ಮ ನಾಡಿನಲ್ಲಿ ಎಂತಹ ರಕ್ತ ಹರಿಯುತ್ತಿದೆ ಎಂಬುದನ್ನೂ ಮೊದಲು ನಾವು ಅರಿಯಬೇಕು. ಅದು ಹಿಂದೆ ಏನನ್ನು ಸಾಧಿಸಿತು ಎನ್ನುವುದರ ಮೇಲೆ ನಮಗೆ ಶ್ರದ್ಧೆ ಇರಬೇಕು. ಆ ಗತವೈಭವದ ಅರಿವಿನಿಂದ ಮತ್ತು ಅದರ ಮೇಲಿನ ಶ್ರದ್ಧೆಯಿಂದ ಹಿಂದಿಗಿಂತ ಹೆಚ್ಚು ವೈಭವಯುತವಾದ ಭರತಖಂಡವನ್ನು ನಾವು ನಿರ್ಮಿಸಬೇಕು.

ಹಿಂದೆ ದುರ್ದೆಶೆಯ ಮತ್ತು ಅವನತಿಯ ಸಮಯ ಇತ್ತು. ನಮಗೆ ಅದೆಲ್ಲ ಗೊತ್ತಿದೆ. ಅದಕ್ಕೆ ಹೆಚ್ಚು ಪ್ರಾಮುಖ್ಯವನ್ನು ನಾನು ಕೊಡುವುದಿಲ್ಲ. ಅಂಥ ಸಮಯಗಳು ಅವಶ್ಯವಾಗಿದ್ದವು. ವಿಶಾಲ ವೃಕ್ಷವು ಸುಂದರವಾದ ಮಾಗಿದ ಫಲವನ್ನು ಕೊಡುವುದು. ಅದು ನೆಲಕ್ಕೆ ಬಿದ್ದು, ಕೊಳೆತು, ನಾಶವಾಗುವುದು. ಆ ನಾಶವೇ ಭವಿಷ್ಯದ ವೃಕ್ಷವು ಬೇರು ಬಿಡುವುದಕ್ಕೆ ಕಾರಣವಾಗುವುದು. ಮುಂದಿನದು ಹಿಂದಿನದಕ್ಕಿಂತ ಬಹುಶಃ ಹೆಚ್ಚು ಉತ್ತಮವಾದ ವೃಕ್ಷವಾಗಬಹುದು. ನಾವೆಲ್ಲ ಸಾಗಿ ಬಂದ ಅವನತಿಯ ಕಾಲವು ಅವಶ್ಯಕವಾಗಿತ್ತು. ಈ ಅವನತಿಯಿಂದ ಭವಿಷ್ಯ ಭಾರತ ಉದ್ಭವಿಸುವುದು. ಆದಾಗಲೇ ಚಿಗುರುತ್ತಿದೆ. ಮೊದಲ ತಳಿರುಗಳಾಗಲೇ ಕಾಣುತ್ತಿವೆ. ಊರ್ಧ್ವಮೂಲದ ಭೀಮವೃಕ್ಷವದು ಆಗಲೇ ಗೋಚರಿಸುತ್ತಿದೆ.

ಆಧ್ಯಾತ್ಮಿಕ ಆಹಾರಕ್ಕಾಗಿ ಇಡಿಯ ಜಗತ್ತು ಭರತಖಂಡದ ಕಡೆಗೆ ನೋಡುತ್ತಿದೆ. ಭರತಖಂಡವು ಎಲ್ಲಾ ಜನಾಂಗಗಳಿಗೂ ಇದನ್ನು ಒದಗಿಸಬೇಕಾಗಿದೆ. ಮಾನವಕೋಟಿಗೆ ಅತಿ ಶ್ರೇಷ್ಠ ಆದರ್ಶ ಇಲ್ಲಿ ಮಾತ್ರ ಇದೆ. ಸಂಸ್ಕೃತ ಸಾಹಿತ್ಯದಲ್ಲಿ ಮತ್ತು ದರ್ಶನಗಳಲ್ಲಿ ಹುದುಗಿರುವ, ನಮ್ಮ ಭರತಭೂಮಿಯ ಒಂದು ಸ್ವಭಾವವಾಗಿರುವ, ಈ ಆದರ್ಶವನ್ನು ಪಾಶ್ಚಾತ್ಯ ವಿದ್ವಾಂಸರು ಈಗ ತಿಳಿದುಕೊಳ್ಳಲು ಪ್ರಯತ್ನಿಸುತ್ತಿರುವರು. ನಮ್ಮ ಪವಿತ್ರ ಭಾರತವರ್ಷ ಧರ್ಮಗಳ ಮತ್ತು ದರ್ಶನಗಳ ಪುಣ್ಯಭೂಮಿ; ವಿಖ್ಯಾತನಾಮರಾದ ಮಹಾತ್ಮರು, ಋಷಿಗಳು ಜನ್ಮವೆತ್ತಿದ ನಾಡು, ತ್ಯಾಗಭೂಮಿ. ಕೇವಲ ಇಲ್ಲಿ ಮಾತ್ರವೇ, ಪುರಾತನ ಕಾಲದಿಂದ ಇಂದಿನ ಅತ್ಯಾಧುನಿಕ ಕಾಲದವರೆಗೂ ಮಾನವನ ಎದುರಿಗೆ ಸರ್ವೋಚ್ಚ ಆದರ್ಶ ಇರುವುದು. ಭರತ ಖಂಡದ ಜೀವಾಳ ರಾಜನೀತಿಯಲ್ಲ, ಸೈನ್ಯಶಕ್ತಿಯಲ್ಲ, ಆರ್ಥಿಕ ಅಥವಾ ಯಾಂತ್ರಿಕ ಪರಮಾಧಿಕಾರವೂ ಅಲ್ಲ. ಧರ್ಮ ಒಂದೇ ನಮ್ಮ ಜೀವಾಳ, ಅದನ್ನೇ ನಾವು ಇಟ್ಟುಕೊಳ್ಳುವೆವು. ಅಧ್ಯಾತ್ಮವೇ ಸದಾ ಭಾರತದಲ್ಲಿದ್ದುದು ಕಂಡುಬರುತ್ತದೆ. •

ಧಾರಾವಾಹಿ

# ಬನ್ನಿ, ದಕ್ಷಿಣೇಶ್ವರಕ್ಕೆ

ಸ್ವಾಮಿ ಆಶುತೋಷಾನಂದ

**ನಾ**ವೀಗ ಕಾಳೀಮಾತೆಯ ಪ್ರತಿಮೆಯ ಮುಂದುಗಡೆ ನಿಂತು ಕೊಂಡಿದ್ದೇವೆ. ಅವಳನ್ನು ಆರಾಧಿಸುತ್ತಿದ್ದೇವೆ. ಇದೇ ಸಮಯದಲ್ಲಿ ಶ್ರೀರಾಮಕೃಷ್ಣರ ಮತ್ತು ಶ್ರೀಮಾತೆ ಶಾರದಾದೇವಿಯವರ ಸ್ಮರಣೆಯನ್ನೂ ನಾವು ಮನಸ್ಸಿಗೆ ತಂದುಕೊಳ್ಳಬೇಕು. ಒಮ್ಮೆ ಶ್ರೀಮಾತೆಯವರು ಬಿಳಿಯ ಬಣ್ಣದ ಮಲ್ಲಿಗೆ ಹೂವುಗಳು ಮತ್ತು ಕೆಂಪುಬಣ್ಣದ ಹೂವುಗಳಿಂದ ಕೂಡಿದ ಹಾರವೊಂದನ್ನು ಸಿದ್ಧಪಡಿಸಿದ್ದರು. ಅದನ್ನು ಜಗನ್ಮಾತೆ ಕಾಳಿಯ ಅಲಂಕಾರಕ್ಕಾಗಿ ಕಾಳೀ ದೇವಾಲಯಕ್ಕೆ ಕಳಿಸಿಕೊಟ್ಟರು. ಅದಾಗಿ ಸ್ವಲ್ಪಹೊತ್ತಿನ ನಂತರ ಶ್ರೀರಾಮಕೃಷ್ಣರು ದೇಗುಲಕ್ಕೆ ಬಂದರು. ಪುಷ್ಪಮಾಲೆಯಿಂದ ಅಲಂಕೃತಳಾಗಿ ಕಂಗೊಳಿಸುತ್ತಿದ್ದ ಜಗನ್ಮಾತೆಯನ್ನು ಕಂಡರು. ಕಡುಕಪ್ಪಾಗಿದ್ದ ಕಾಳಿಯ ಮೂರ್ತಿಗೆ ಹಾಕಿದ ಆ ಹೂವಿನ ಹಾರದ ವರ್ಣವೈವಿಧ್ಯದಿಂದ ದಿವ್ಯಮಾತೆಯ ಅಪಾರ ಮೆರುಗು ಇಮ್ಮಡಿಸಿತ್ತು. ಈ ಹಾರವನ್ನು ತಯಾರಿಸಿದವರು ಯಾರು ಎಂದು ವಿಚಾರಿಸಿದಾಗ, ಶ್ರೀಮಾತೆಯವರೆಂದು ತಿಳಿಯಿತು. ಶ್ರೀಮಾತೆಯೂ ಬಂದು ಇದನ್ನು ನೋಡಲಿ ಎಂದು ಅವರಿಗೆ ಹೇಳಿಕಳಿಸಿದರು. ಅವರಿಬ್ಬರೂ ಆರಾಧನಾಭಾವದಿಂದ ಜಗನ್ಮಾತೆ ಕಾಳಿಯ ಮುಂದೆ ನಿಂತುಕೊಂಡರು.

## ನಾಟ್ಯಮಂದಿರ

ದಿವ್ಯಮಾತೆ ಕಾಳಿಗೆ ನಾವು ಪೂಜೆಯನ್ನು ಸಲ್ಲಿಸಿದ್ದೇವೆ, ಪ್ರಾರ್ಥನೆಯನ್ನು ಮಾಡಿದ್ದೇವೆ. ಅನಂತರ ಗರ್ಭಗುಡಿಯ ಮುಂದುಗಡೆಯೇ ಇರುವ ಮೆಟ್ಟಿಲುಗಳ ಮೂಲಕ ಇಳಿದು, ನಾಟ್ಯಮಂದಿರವನ್ನು ಪ್ರವೇಶಿಸುತ್ತೇವೆ. ಇದರ ಮಾಳಿಗೆಯಲ್ಲಿ ಶಿವನ ಗಣಗಳಾದ ನಂದಿ ಮತ್ತು ಭೃಂಗಿಯರೊಡಗೂಡಿದ ಭೈರವಮೂರ್ತಿಯನ್ನು ಕಾಣುತ್ತೇವೆ. ಮಾತೆ ಕಾಳಿಯ ದರ್ಶನಕ್ಕಾಗಿ ಹೋಗುವಾಗ, ಶ್ರೀರಾಮಕೃಷ್ಣರು ಈ ಮೂರ್ತಿಗಳಿಗೆ ನಮಸ್ಕರಿಸಿ, ದಿವ್ಯಮಾತೆಯ ಸನ್ನಿಧಿಗೆ ಪ್ರವೇಶಮಾಡಲು ಅನುಮತಿಯನ್ನು ಕೋರುತ್ತಿದ್ದರು.

ಈ ಅಂಗಣವು ಶ್ರೀರಾಮಕೃಷ್ಣರ ಜೀವನದ ಹಲವಾರು ಘಟನೆಗಳ ಸ್ಮರಣೆಯಿಂದ ಸಂಪದ್ಭರಿತವಾಗಿದೆ. ಅವರು ತಮ್ಮ ತಂತ್ರಸಾಧನೆಗಳನ್ನು, ಇಲ್ಲಿ ನಡೆಸಿದ ಕ್ರಿಯೆಯೊಂದರ ಮೂಲಕ ಸುಸಂಪನ್ನಗೊಳಿಸಿದರು. ಶ್ರೀರಾಮಕೃಷ್ಣರ ತಾಂತ್ರಿಕ ಗುರುವಾದ ಭೈರವಿ ಬ್ರಾಹ್ಮಣಿಯು, ಇಲ್ಲಿ ನೆರೆದಿದ್ದ ವಿದ್ವಾಂಸರ ಸಮ್ಮುಖದಲ್ಲಿ, ಅವರನ್ನು ಭಗವಂತನ ಅವತಾರವೆಂದು ಸಾಬೀತುಪಡಿಸಿದಳು.

'ಶ್ರೀರಾಮಕೃಷ್ಣ ವಚನವೇದ'ದಲ್ಲಿ ಬರುವ ಒಂದು ಪ್ರಸಂಗವನ್ನು ಇಲ್ಲಿ ನೆನಪಿಸಿಕೊಳ್ಳೋಣ: ಆಗಲೇ ಬಹಳವಾಗಿ ರಾತ್ರಿಯಾಗಿಬಿಟ್ಟಿದೆ. ಮಾಸ್ಟರ್ ಮನೆಗೆ ಹಿಂದಿರುಗಬೇಕಾಗಿದೆ. ಆದರೆ ಮನಸ್ಸಾಗುತ್ತಿಲ್ಲ. ನರೇಂದ್ರನ ಹತ್ತಿರದಿಂದ ಎದ್ದು ಪರಮಹಂಸರನ್ನು ಹುಡುಕಲಾರಂಭಿಸಿದ. ಅವರ ಮಧುರವಾದ ಮಾತು ಕೇಳಿ ಆತನ ಹೃದಯ ಮುಗ್ಧವಾಗಿ ಹೋಗಿದೆ; ಮತ್ತೆ ಮತ್ತೆ ಕೇಳಬೇಕು ಎಂದು ಉತ್ಕಟೇಚ್ಛೆಯಾಗಿದೆ. ಹುಡುಕುತ್ತ ಹುಡುಕುತ್ತ, ಕಾಳೀ ದೇವಾಲಯದ ಮುಂಭಾಗದಲ್ಲಿರುವ ನಾಟ್ಯಮಂದಿರದಲ್ಲಿ ಅವರೊಬ್ಬರೇ ಅಡ್ಡಾಡುತ್ತಿರುವುದನ್ನು ಕಂಡ. ದೇವಾಲಯದ ಎರಡು ಪಾರ್ಶ್ವಗಳಲ್ಲಿಯೂ ಬೆಳಕು ಉರಿಯುತ್ತಿದೆ. ಆ ಬೃಹತ್ ನಾಟ್ಯಮಂದಿರದಲ್ಲಿ ಎಲ್ಲೋ ಒಂದು ದೀಪ ಮಾತ್ರ ಉರಿಯುತ್ತಿದೆ, ಅದೂ ಕ್ಷೀಣವಾಗಿ. ಕತ್ತಲೆ ಬೆಳಕು ಮಿಶ್ರವಾದಾಗ ಹೇಗೆ ಕಾಣುತ್ತದೆಯೋ ಹಾಗೆ ಕಾಣುತ್ತದೆ, ನಾಟ್ಯಮಂದಿರದ ಒಳಭಾಗ (*ಶ್ರೀರಾಮಕೃಷ್ಣ ವಚನವೇದ, ಪೂರ್ವಾರ್ಧ*, ಪುಟ ೨೦).

ನಾವು ಈ ಅಂಗಣದಲ್ಲಿಯೇ, ದಕ್ಷಿಣ ದಿಕ್ಕಿನತ್ತ ನಡೆದು ಮೆಟ್ಟಿಲುಗಳನ್ನು ಇಳಿಯೋಣ. ಅಲ್ಲಿ ಒಂದು ಗುಂಡಿ ಕಾಣುತ್ತದೆ. ಅದರ ಮಧ್ಯೆ ಒಂದು ಮರದ ಕಂಭವನ್ನು ನೆಟ್ಟಿದೆ. ಇಲ್ಲಿ ವಿಶೇಷ ದಿನಗಳಂದು ಪ್ರಾಣಿಬಲಿ ನೀಡಲಾಗುತ್ತಿತ್ತು. ಭಕ್ತರು ಅಲ್ಲಿನ ಮಣ್ಣನ್ನು ಪ್ರಸಾದವಾಗಿ ತೆಗೆದುಕೊಂಡು ಹೋಗುವುದನ್ನು ಕಾಣಬಹುದು. ನಮ್ಮಲ್ಲಿರುವ ಪಾಶವೀ ವೃತ್ತಿಯನ್ನು ಜಗನ್ಮಾತೆಯ ಪಾದಾರವಿಂದಗಳಲ್ಲಿ ಬಲಿ ಕೊಡಬೇಕೆಂಬ ಅಂಶವನ್ನು ಇದು ಸೂಚಿಸುತ್ತದೆ. ಆದರೆ, ಕಾಲಕ್ರಮೇಣ ಇದರ ನಿಜವಾದ ಮಹತ್ವ ಮರೆಯಾಗಿ, ಬಲಿಕ್ರಿಯೆಯೇ ಪ್ರಾಧಾನ್ಯತೆಯನ್ನು ಪಡೆಯಿತು.

## ರಾಧಾಕಾಂತ ದೇವಸ್ಥಾನ

ರಾಧಾಕಾಂತ ದೇವಸ್ಥಾನದಲ್ಲಿ ರಾಧೆ ಮತ್ತು ಕೃಷ್ಣರ ಮೂರ್ತಿಗಳಿವೆ. ವೇದಿಕೆಯ ಮೇಲಿರುವ ಇವು ಪಶ್ಚಿಮ ದಿಕ್ಕಿನತ್ತ ಮುಖಮಾಡಿವೆ. ೧೮೫೫ರಲ್ಲಿ ಶ್ರೀರಾಮಕೃಷ್ಣರು ಈ ದೇವಾಲಯ

